# ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ

ಸಂಖ್ಯೆ: **ಕೆಸಿಓ 01-39713**

ನಿಗಮ ಕಾರ್ಯಾಲಯ,
ಕ.ವಿ.ಪ್ರ.ನಿ.ನಿ., ಕಾವೇರಿ ಭವನ,
ಬೆಂಗಳೂರು – 560009,
ದಿನಾಂಕ: 28 JUN 2012

## ಸುತ್ತೋಲೆ

ಮಾನ್ಯರೇ:

**ವಿಷಯ : ದಿನಾಂಕ 01.04.2006 ನಂತರ ನೇಮಕವಾದ ನೌಕರರ ವೇತನದಲ್ಲಿ ಹೊಸ ವ್ಯಾಖ್ಯಾನಿಸಿದ ಅಂಶದಾಯಿ ಕೊಡುಗೆ ಯೋಜನೆಯಡಿ ಮುರಿಕೆಯಾದ ಮೊಬಲಗು ಮತ್ತು ನಿಗಮದ ಕೊಡುಗೆಯ ವಿವರವನ್ನು ನಿಗಮ ಕಚೇರಿಗೆ ಸಲ್ಲಿಸುವ ವಿಧಾನದ ಬಗ್ಗೆ**

**ಉಲ್ಲೇಖ:** 1) ನಿಗಮದ ಆದೇಶ ಸಂಖ್ಯೆ ಕವಿಪ್ರನಿನಿ/ಬಿ16/4977/2005-06 ದಿನಾಂಕ 05.07.2007

2) ನಿಗಮದ ಆದೇಶ ಸಂಖ್ಯೆ ಕವಿಪ್ರನಿನಿ/ಬಿ16/4977/2005-06 ಸಮಸಂಖ್ಯೆ ದಿನಾಂಕ 21.08.2007

3) ಈ ಕಚೇರಿಯ ಪತ್ರ ಸಂಖ್ಯೆ ಕೆಸಿಓ–01/39702/2012-13 ದಿನಾಂಕ 20.04.2012

*************

ಈ ಕಚೇರಿಯ ಉಲ್ಲೇಖ 3 ರ ಪತ್ರದಲ್ಲಿ ಹೊಸ ವ್ಯಾಖ್ಯಾನಿಸಿದ ಅಂಶದಾಯಿ ಕೊಡುಗೆ ಯೋಜನೆಯಡಿಯಲ್ಲಿ ದಿನಾಂಕ 01.04.2006 ರ ನಂತರ ನೇಮಕವಾದ ನೌಕರರ ವೇತನದಲ್ಲಿ ಕಡಿತಗೊಳಿಸಲಾದ ವಂತಿಗೆ ಹಾಗೂ ನಿಗಮದ ವಂತಿಗೆಯ ಮೊಬಲಗಿಗೆ ನಿಗಮ ಕಚೇರಿಯಿಂದ ಹಣವನ್ನು ತರಿಸಿ ಡಿ.ಡಿ ಯನ್ನು ಖರೀದಿಸಿ ವ್ಯವಸ್ಥಾಪಕರು (ನಗದು ಮತ್ತು ಲೆಕ್ಕ ಶಾಖೆ) ನಿಗಮ ಕಚೇರಿಗೆ ಕಳುಹಿಸುವುದನ್ನು 01.04.2012 ರಿಂದ ನಿಲ್ಲಿಸಿ, ಸದರಿ ಮೊಬಲಗನ್ನು ಲೆಕ್ಕ ಶೀರ್ಷಿಕೆ 46.952 ಮತ್ತು 44.150 ಗಳಲ್ಲಿ ಲೆಕ್ಕಿಸುವುದನ್ನು ಮುಂದುವರಿಸಿ ಎಂದು ಸೂಚಿಸಲಾಗಿರುವುದು ಸರಿಯಷ್ಟೆ.

ಸದರಿ ಮೊಬಲಗನ್ನು 2012-2013 ಸಾಲಿನಲ್ಲಿ ಹಾಗೂ ಇನ್ನುಮುಂದೆ ನಿಗಮ ಕಚೇರಿಯಿಂದ ನೇರವಾಗಿ ಪಿಂಚಣಿ ಮತ್ತು ಉಪದಾನದ ಟ್ರಸ್ಟಿಗೆ ಪಾವತಿಸುವ ಸಲುವಾಗಿ ಕವಿಪ್ರನಿನಿಯ ಎಲ್ಲಾ ಲೆಕ್ಕ ಘಟಕದ ಮುಖ್ಯಸ್ಥರು ಮತ್ತು ವೇತನ ಬಟವಾಡೆ ಮಾಡುವ ಅಧಿಕಾರಿಗಳು ಈ ಕೆಳಕಂಡ ಮಾರ್ಗ ದರ್ಶನಗಳನ್ನು ಚಾಚು ತಪ್ಪದೇ ಪಾಲಿಸಲು ಸೂಚಿಸಲಾಗಿದೆ. ಇದರಲ್ಲಿ ಏನಾದರೂ ಲೋಪ ದೋಷಗಳು ಕಂಡು ಬಂದಲ್ಲಿ ಸಂಬಂಧಿಸಿದ ವೇತನ ಬಟವಾಡೆ ಮಾಡುವ ಅಧಿಕಾರಿಗಳನ್ನು ನೇರವಾಗಿ ಜವಾಬ್ದಾರರನ್ನಾಗಿ ಮಾಡಲಾಗುವುದು.

1) 31.03.2012 ರ ಅಂತ್ಯಕ್ಕೆ 46.952 ಮತ್ತು 44.150 ಲೆಕ್ಕ ಶೀರ್ಷಿಕೆಗಳಲ್ಲಿ ಇರುವ ಅಂತಿಮ ಶಿಲ್ಕುಗಳಿಗೆ ನೌಕರರ ವಿವರಗಳನ್ನು, ಈ ಸುತ್ತೋಲೆಗೆ ಲಗತ್ತಿಸಲಾದ ನಮೂನೆಯಲ್ಲಿ (ಅನುಬಂಧ-ಅ) ಆಂತರಿಕ ಪರಿಶೋಧನೆಯಿಂದ ಪರಿಶೀಲಿಸಿ ದಿನಾಂಕ 30.06.2012 ರಳೊಗೆ ನಿಯಂತ್ರಣಾಧಿಕಾರಿ (ಲೆಕ್ಕ ಪಿಂಚಣಿ ಮತ್ತು ಮುಂಗಡ) ಕ.ವಿ.ಪ್ರ.ನಿ.ನಿ. 7ನೇ ಮಹಡಿ, ಕಾವೇರಿ ಭವನ ಬೆಂಗಳೂರು ರವರಿಗೆ 'ಇ'ಮೇಲ್ "aocandcpskptcl@gmail.com " ವಿಳಾಸಕ್ಕೆ ಕಳುಹಿಸುವುದು ಒಂದುವೇಳೆ ಸದರಿ ಲೆಕ್ಕ ಶಿರ್ಷಿಕೆಗಳಲ್ಲಿ ಶಿಲ್ಕು ಇಲ್ಲದ ಪಕ್ಷದಲ್ಲಿ ಸದರಿ ವಿವರಣಾ ಪಟ್ಟಿಯಲ್ಲಿ ಶಿಲ್ಕು ಇರುವುದಿಲ್ಲ ಎಂದು ನಮೂದಿಸಿ ಕಳುಹಿಸುವುದು.

2) ಏಪ್ರಿಲ್ 2012, ಮೇ 2012, ಮತ್ತು ಜೂನ್ 2012ರಲ್ಲಿ ಕಡಿತಗೊಳಿಸಲಾದ ನೌಕರರವಂತಿಗೆ ಮತ್ತು ನಿಗಮದ ವಂತಿಗೆಯನ್ನು ಈ ಸುತ್ತೋಲೆಗೆ ಲಗತ್ತಿಸಲಾದ ನಮೂನೆಯಲ್ಲಿ (ಅನುಬಂಧ-2) ನೌಕರರ ವಿವರಗಳೊಂದಿಗೆ ಆಂತರಿಕ ಪರಿಶೋಧನೆಯಿಂದ ಪರಿಶೀಲಿಸಿ ದಿನಾಂಕ 05.07.2012 ರಳೊಗೆ ನಿಯಂತ್ರಣಾಧಿಕಾರಿ (ಲೆಕ್ಕ ಪಿಂಚಣಿ ಮತ್ತು ಮುಂಗಡ) ಕವಿಪ್ರನಿನಿ 7ನೇ ಮಹಡಿ, ಕಾವೇರಿಭವನ ಬೆಂಗಳೂರುರವರ 'ಇ' ಮೇಲ್ "aocandcpskptcl@gmail.com" ವಿಳಾಸಕ್ಕೆ ಕಳುಹಿಸುವುದು. (ಪ್ರತಿಯೊಂದು ತಿಂಗಳಿಗೂ ಪ್ರತ್ಯೇಕ ವಿವರಣಾ ಪಟ್ಟಿಯನ್ನು ತಯಾರಿಸಿ ಕಳುಹಿಸುವುದು)

3) ಜುಲೈ 2012 ಮತ್ತು ನಂತರ ಕಡಿತಗೊಳಿಸಲಾದ ಮಾಸಿಕ ವಂತಿಗೆಯ ವಿವರಗಳನ್ನು ಆಂತರಿಕ ಪರಿಶೋಧನೆಯಿಂದ ಪರಿಶೀಲಿಸಿ ನಿಗಧಿತ ನಮೂನೆಯಲ್ಲಿ, (ಅನುಬಂಧ-ಇ) ಮುಂದಿನ ತಿಂಗಳ 5ನೇ ದಿನಾಂಕದೊಳಗೆ ನಿಯಂತ್ರಣಾಧಿಕಾರಿ (ಲೆಕ್ಕ ಪಿಂಚಣಿ ಮತ್ತು ಮುಂಗಡ) ಕವಿಪ್ರನಿನಿ, 7ನೇ ಮಹಡಿ, ಕಾವೇರಿಭವನ ಬೆಂಗಳೂರುರವರ 'ಇ' ಮೇಲ್ "aocandcpskptcl@gmail.com" ವಿಳಾಸಕ್ಕೆ ಕಳುಹಿಸುವುದು.

4) ಈಗ್ಗೆ ಕಳುಹಿಸಲಾದ ಮಾಸಿಕ ವಂತಿಗೆಯ ಮೊಬಲಗು ಮಾಸಿಕ ತಾಳೆಪಟ್ಟಿ ಲೆಕ್ಕ ಶೀರ್ಷಿಕೆ 46.952 ಮತ್ತು 44.150 ನಲ್ಲಿ ಶಿಲ್ಕುಗಳಿಗೆ ತಾಳೆಯಾಗಬೇಕು.

5) ಪ್ರತಿ 3 ತಿಂಗಳಿಗೊಮ್ಮೆ ನಿಗಮ ಕಚೇರಿಯು ಕಳುಹಿಸುವ ಸಮನ್ವಯ ಪಟ್ಟಿಗೆ ತಾಳೆ ಮಾಡಿ, ದೃಢೀಕರಿಸಿ ಕಳುಹಿಸಬೇಕು.

6) ಲೆಕ್ಕ ಶೀರ್ಷಿಕೆ 46.952 ಮತ್ತು 44150 ನಲ್ಲಿ ಲೆಕ್ಕಿಸಲಾದ ಮೊಬಲಗನ್ನು ಮಾರ್ಚ್ ಅಂತಿಮ ಲೆಕ್ಕಗಳ ಸಲ್ಲಿಸುವಾಗ ಪಾರ್ಟ್ 'ಸಿ' ನಲ್ಲಿ ನಿಗಮ ಕಚೇರಿಗೆ ವರ್ಗಾವಣೆ ಮಾಡಬೇಕು.

7) ನಿಗಮದ ಆದೇಶ ದಿನಾಂಕ 21.08.2007 ರ ಕಂಡಿಕೆ 17ರ ಪ್ರಕಾರ ನೌಕರನು ಒಂದು ಕಚೇರಿಯಿಂದ ಮತ್ತೊಂದು ಕಚೇರಿಗೆ ವರ್ಗಾವಣೆಗೊಂಡಾಗ ವೇತನ ಬಟವಾಡೆ ಮಾಡುವ ಅಧಿಕಾರಿಯು, ನೌಕರನ ಎಲ್.ಪಿ.ಸಿಯಲ್ಲಿ ಪಿ.ಪಿ.ಎ.ಎನ್. ಸಂಖ್ಯೆಯನ್ನು ಮತ್ತು ಸದರಿ ವಿಭಾಗದಲ್ಲಿ ನೌಕರನ ಕೊಡುಗೆಯನ್ನು ಯಾವ ತಿಂಗಳಿನವರಿಗೆ ವಸೂಲಿ ಮಾಡಲಾಗಿದೆ ಎಂಬುದನ್ನು ಸ್ಪಷ್ಟವಾಗಿ ನಮೂದಿಸಬೇಕು ಎಂದು ಸೂಚಿಸಿದ್ದರೂ ಸಹ ಹಲವಾರು ವೇತನ ಬಟವಾಡೆ ಮಾಡುವ ಅಧಿಕಾರಿಗಳು ಈ ಸೂಚನೆಯನ್ನು ಪಾಲಿಸುತ್ತಿಲ್ಲ ಎಂಬುದು ಈ ಕಚೇರಿಯ ಗಮನಕ್ಕೆ ಬಂದಿರುತ್ತದೆ.

8) ಕಂಡಿಕೆ 7 ರ ಸೂಚನೆಯನ್ನು ಖಡ್ಡಾಯವಾಗಿ ಪಾಲಿಸುವುದಲ್ಲದೆ, ಸದರಿ ದಾಖಲಾತಿಯನ್ನು ನೌಕರನ ಸೇವಾ ಪುಸ್ತಕದಲ್ಲಿ ಖಡ್ಡಾಯವಾಗಿ ನಮೂದಿಸಿ, ವೇತನ ಬಟವಾಡೆ ಅಧಿಕಾರಿಯು ದೃಢಿಕರಿಸಿ ಕಳುಹಿಸಬೇಕು ಇದಕ್ಕಾಗಿ ಸೇವಾ ಪುಸ್ತಕದಲ್ಲಿ ಒಂದು ಪ್ರತ್ಯೇಕ ಪುಟವನ್ನು ನಿಗಧಿಪಡಿಸಲು ಸೂಚಿಸಿದೆ. ಮುಂದುವರಿದಂತೆ, ಬೇರೆ ವಿಭಾಗದಿಂದ ವರ್ಗಾವಣೆಗೊಂಡು ಬಂದಂತಹ ನೌಕರರ ವಿವರಗಳನ್ನು ಹಾಗೂ ಮರಣ ಹೊಂದಿದ ನೌಕರರ ವಿವರಗಳನ್ನು ಸೇವಾ ಪುಸ್ತಕದಲ್ಲಿ ಖಡ್ಡಾಯವಾಗಿ ನಮೂದಿಸತಕ್ಕದು.

9) ಪ್ರತಿಯೊಂದು ವಾರ್ಷಿಕ ಹಣಕಾಸು ವರ್ಷದ ಕೊನೆಯಲ್ಲಿ ಆ ವರ್ಷದಲ್ಲಿ ಪ್ರತಿಯೊಬ್ಬ ನೌಕರನ ವಂತಿಗೆ ಮತ್ತು ನಿಗಮದ ವಂತಿಗೆ ವಿವರಗಳನ್ನು ನಿಗಮ ಕಚೇರಿಗೆ ನಿಗಧಿತ ನಮೂನೆಯಲ್ಲಿ ಕಳುಹಿಸಬೇಕು.

10) ಈ ಕಚೇರಿಯ ವ್ಯವಸ್ಥಾಪಕರು, (ನಗದು ಮತ್ತು ಲೆಕ್ಕ ಶಾಖೆ) ರವರು ಎಲ್ಲಾ ಲೆಕ್ಕ ಘಟಕಗಳಿಂದ ಬಂದಂತಹ ವಿವರಗಳನ್ನು ಕ್ರೋಡಿಕರಿಸಿ ಲೆಕ್ಕ ಶೀರ್ಷಿಕೆ 46.952 ಮತ್ತು 44.150 ಗಳಿಗೆ ಖರ್ಚು ಹಾಕಿ ಬಿಲ್ಲು ಪಾಸುಮಾಡಿ ಮಾಸಿಕ 10 ನೇ ದಿನಾಂಕದೊಳಗೆ ನಿಯಂತ್ರಣಾಧಿಕಾರಿ (ಹಣಕಾಸು) ಕಬಿಪ್ರನಿನಿ ರವರಿಗೆ ಕಳುಹಿಸುವುದು.

11) ನಿಯಂತ್ರಣಾಧಿಕಾರಿ (ಹಣಕಾಸು) ಕವಿಪ್ರನಿನಿ ರವರು, ವ್ಯವಸ್ಥಾಪಕರು ನ ಮತ್ತು ಲೆ ಶಾಖೆಯಿಂದ ಬಂದ ಬಿಲ್ಲ್‌ಗೆ RTGS ಮೂಲಕ ಮೊಬಲಗನ್ನು ನಿಯಂತ್ರಣಾಧಿಕಾರಿ, ಪಿಂಚಣಿ ಮತ್ತು ಉಪದಾನ ಟ್ರಸ್ಟ್ 6 ನೇ ಮಹಡಿ ಬೆಂಗಳೂರು ರವರಿಗೆ ಕಳುಹಿಸಬೇಕು, ಹಾಗೂ ಮಾಹಿತಿಯನ್ನು ನಿಯಂತ್ರಣಾಧಿಕಾರಿ ಎ.ಪಿ.ಮತ್ತು ಎ ಕವಿಪ್ರನಿನಿ ರವರಿಗೆ ನೀಡುವುದು.

**ಅನುಬಂಧ ಅ.ಆ.ಇ ಗಳನ್ನು ಕವಿಪ್ರನಿನಿ ಅಂತರ್ಜಾಲದಲ್ಲಿ –eprasarana -> Administrative -> Pension Section ಗೆ Uploud ಮಾಡಲಾಗಿದೆ. ಸದರಿ ಅನುಬಂಧಗಳನ್ನು ಡೌನ್ ಲೋಡ್ ಮಾಡಿಕೊಂಡು ವಿವರಗಳನ್ನು ಶೀಘ್ರವೇ 'ಇ' ಮೇಲ್ aocandcpskptcl@gmail.com ವಿಳಾಸಕ್ಕೆ ಕಳುಹಿಸಲು ಸೂಚಿಸಿದೆ.**

ಆರ್ಥಿಕ ಸಲಹೆಗಾರರು
(ಲೆಕ್ಕ ಮತ್ತು ಸಂಪನ್ಮೂಲ)

ಅನುಬಂಧ–ಅ

**ಹೊಸ ವಿಶ್ರಾಂತಿ ವೇತನ ಯೋಜನೆಯ ಅಡಿಯಲ್ಲಿ, ದಿನಾಂಕ 01.04.2006 ರಂದು ಮತ್ತು ನಂತರ ನೇಮಕವಾದ ನೌಕರರ ಅಂಶದಾಯಿ ಕೊಡುಗೆ (46.952) ಹಾಗೂ ನಿಗಮದ ಕೊಡುಗೆ (44.150)ಯ 31.03.2012 ರ ಅಂತ್ಯಕ್ಕೆ ಇರುವ ಶಿಲ್ಕುಗಳಿಗೆ ವಿವರಗಳು.**

ಲೆಕ್ಕ ಘಟಕದ ಹೆಸರು :

ಸ್ಥಳ ಸಂಕೇತ ಸಂಖ್ಯೆ :

| ಕ್ರಮ ಸಂ | ಟ್ರಸ್ಟ್ ಹಂಚಿಕೆ ಮಾಡಿರುವ ಅಸ್ಯದ್ರುಶ ಪಿ.ಐ.ಎ.ಎಸ್ ಸಂಖ್ಯೆ | ನೌಕರನ ಹೆಸರು | ಪದನಾಮ | ಮೂಲ ವೇತನ | ಡಿಯರ್‌ನೆಸ್ ಪೇ | ತುಟ್ಟಿಭತ್ಯೆ | ಒಟ್ಟು ಮೊಬಲಗು | ನೌಕರನ ವಂತಿಗೆ (46.952) | ನಿಗಮದ ವಂತಿಗೆ (44.150) | ಒಟ್ಟು ವಂತಿಗೆ (9+10) |
|---|---|---|---|---|---|---|---|---|---|---|
| 1 | 2 | 3 | 4 | 5 | 6 | 7 | 8 | 9 | 10 | 11 |
| 1 | | | | | | | | | | |
| 2 | | | | | | | | | | |
| 3 | | | | | | | | | | |
| 4 | | | | | | | | | | |
| ಒಟ್ಟು | | | | | | | | | | |

ಸೂಚನೆ : 1) ಪ್ರತಿ ನೌಕರನ ಒಟ್ಟು ವಂತಿಗೆಯು (ಕಾಲಂ 9 ರಲ್ಲಿ) ಕಾಲಂ 8 ರ ಒಟ್ಟು ಮೊಬಲಗಿನ ಶೇ10 ರಷ್ಟಿರ ಬೇಕು

2) ಪ್ರತಿ ನೌಕರನಿಗೆ ನೀಡುವ ನಿಗಮದ ವಂತಿಗೆಯು (ಕಾಲಂ 10 ರಲ್ಲಿ) ಕಾಲಂ 8 ರ ಒಟ್ಟು ಮೊಬಲಗಿನ ಶೇ10 ರಷ್ಟಿರ ಬೇಕು

3) ಒಟ್ಟು ವಂತಿಗೆಯ ಮೊಬಲಗು ಸದರಿ ಲೆಕ್ಕ ಶೀರ್ಷಿಕೆಗಳ ದಿನಾಂಕ 31.03.2012 ರ ಅಂತ್ಯಕ್ಕೆ ಇರುವ ಶಿಲ್ಕಿಗೆ ತಾಳೆಯಾಗಬೇಕು.

ಸಹಾಯಕ ಲೆಕ್ಕಾಧಿಕಾರಿ

ಲೆಕ್ಕಾಧಿಕಾರಿ

ಪರಿಶೀಲಿಸಲಾಗಿದೆ

ಉಲೆನಿ/ಲೆಅ/ಸಲೆಅ

ಆಂತರಿಕ ತನಿಖೆ

ಅನುಬಂಧ–ಆ

**ಹೊಸ ವಿಶ್ರಾಂತಿ ವೇತನ ಯೋಜನೆಯ ಅಡಿಯಲ್ಲಿ, ದಿನಾಂಕ 01.04.2006 ರಂದು ಮತ್ತು ನಂತರ ನೇಮಕವಾದ ನೌಕರರ ಅಂಶದಾಯಿ ಕೊಡುಗೆ (46.952) ಹಾಗೂ ನಿಗಮದ ಕೊಡುಗೆ (44.150)ಯ ಏಪ್ರಿಲ್ 2012 ರಲ್ಲಿ /ಲೆಕ್ಕ ಶಿರ್ಷಿಕೆಗೆ ಜಮಾ ಆದ ವಿವರಗಳು**

ಲೆಕ್ಕ ಘಟಕದ ಹೆಸರು :

ಸ್ಥಳ ಸಂಕೇತ ಸಂಖ್ಯೆ :

| ಕ್ರಮ ಸಂ | ಟ್ರಸ್ಟ್ ಹಂಚಿಕೆ ಮಾಡಿರುವ ಅಸ್ಪೃದ್ರುಶ ಪಿ.ಐ.ಎ.ಎಸ್ ಸಂಖ್ಯೆ | ನೌಕರನ ಹೆಸರು | ಪದನಾಮ | ಮೂಲ ವೇತನ | ಡಿಯರ್‌ನೆಸ್ ಪೇ | ತುಟ್ಟಿಭತ್ಯೆ | ಒಟ್ಟು ಮೊಬಲಗು | ನೌಕರನ ವಂತಿಗೆ (46.952) | ನಿಗಮದ ವಂತಿಗೆ (44.150) | ಒಟ್ಟು ವಂತಿಗೆ (9+10) |
|---|---|---|---|---|---|---|---|---|---|---|
| 1 | 2 | 3 | 4 | 5 | 6 | 7 | 8 | 9 | 10 | 11 |
| 1 | | | | | | | | | | |
| 2 | | | | | | | | | | |
| 3 | | | | | | | | | | |
| ಒಟ್ಟು | | | | | | | | | | |

ಸೂಚನೆ : 1) ಪ್ರತಿ ನೌಕರನ ಒಟ್ಟು ವಂತಿಗೆಯು (ಕಾಲಂ 9 ರಲ್ಲಿ) ಕಾಲಂ 8 ರ ಒಟ್ಟು ಮೊಬಲಗಿನ ಶೇ10 ರಷ್ಟಿರ ಬೇಕು

2) ಪ್ರತಿ ನೌಕರನಿಗೆ ನೀಡುವ ನಿಗಮದ ವಂತಿಗೆಯು (ಕಾಲಂ 10 ರಲ್ಲಿ) ಕಾಲಂ 8 ರ ಒಟ್ಟು ಮೊಬಲಗಿನ ಶೇ10 ರಷ್ಟಿರ ಬೇಕು

**ಸಂಕ್ಷಿಪ್ತ ವಿವರಗಳು**

1. 31.3.2012 ರ ಅಂತ್ಯಕ್ಕೆ ಇರುವ ಶಿಲ್ಕು 46.952 44.150
2. ಏಪ್ರಿಲ್ 2012 ರಲ್ಲಿ ಜಮಾ ಆದ ಮೊಬಲಗು
   (ಮೇಲ್ಕಂಡ ಪಟ್ಟಿಯ ಪ್ರಕಾರ) -------------
   
   30.4.2012 ಕ್ಕೆ ಅಂತ್ಯಕ್ಕೆ ಇರುವ ಶಿಲ್ಕು -------------

ಸದರಿ ವಿವರಗಳ ಮತ್ತು ಲೆಕ್ಕ ಶೀರ್ಷಿಕೆಗಳಲ್ಲಿನ ಮೊಬಲಗು ಏಪ್ರಿಲ್ 2012 ರ ತಾಳೆಪಟ್ಟಿಗೆ ಹೊಂದಾಣಿಕೆಯಾಗುತ್ತದೆ ಎಂದು ದೃಢೀಕರಿಸುತ್ತಿವೆ.

ಸಹಾಯಕ ಲೆಕ್ಕಾಧಿಕಾರಿ

ಲೆಕ್ಕಾಧಿಕಾರಿ

ಪರಿಶೀಲಿಸಲಾಗಿದೆ

ಉಲೆನಿ/ಲೆಅ/ಸಲೆಅ

ಆಂತರಿಕ ತನಿಖೆ

**ವಿಶೇಷ ಸೂಚನೆ**: ಇದೇ ಮಾದರಿಯಲ್ಲಿ ಮೇ 2012 ಮತ್ತು ಜೂನ್ 2012 ರ ವಿವರಣಾ ಪಟ್ಟಿಯನ್ನು ಪ್ರತ್ಯೇಕವಾಗಿ ಸಲ್ಲಿಸಬೇಕು.

ಅನುಬಂಧ–ಇ

**ಹೊಸ ವಿಶ್ರಾಂತಿ ವೇತನ ಯೋಜನೆಯ ಅಡಿಯಲ್ಲಿ, ದಿನಾಂಕ 01.04.2006 ರಂದು ಮತ್ತು ನಂತರ ನೇಮಕವಾದ ನೌಕರರ ಅಂಶದಾಯಿ ಕೊಡುಗೆ (46.952) ಹಾಗೂ ನಿಗಮದ ಕೊಡುಗೆ (44.150)ಯ ಜುಲೈ 2012 ರಲ್ಲಿ /ಲೆಕ್ಕ ಶಿರ್ಷಿಕೆಗೆ ಜಮಾ ಆದ ವಿವರಗಳು**

ಲೆಕ್ಕ ಘಟಕದ ಹೆಸರು :

ಸ್ಥಳ ಸಂಕೇತ ಸಂಖ್ಯೆ :

| ಕ್ರಮ ಸಂ | ಟ್ರಸ್ಟ್ ಹಂಚಿಕೆ ಮಾಡಿರುವ ಅಸ್ಪೃದ್ಯುಶ ಪಿ.ಐ.ಎ.ಎಸ್ ಸಂಖ್ಯೆ | ನೌಕರನ ಹೆಸರು | ಪದನಾಮ | ಮೂಲ ವೇತನ | ಡಿಯರ್‌ನೆಸ್ ಪೇ | ತುಟ್ಟಿಭತ್ಯೆ | ಒಟ್ಟು ಮೊಬಲಗು | ನೌಕರನ ವಂತಿಗೆ (46.952) | ನಿಗಮದ ವಂತಿಗೆ (44.150) | ಒಟ್ಟು ವಂತಿಗೆ (9+10) |
|---|---|---|---|---|---|---|---|---|---|---|
| 1 | 2 | 3 | 4 | 5 | 6 | 7 | 8 | 9 | 10 | 11 |
| 1 | | | | | | | | | | |
| 2 | | | | | | | | | | |
| 3 | | | | | | | | | | |
| ಒಟ್ಟು | | | | | | | | | | |

ಸೂಚನೆ : 1) ಪ್ರತಿ ನೌಕರನ ಒಟ್ಟು ವಂತಿಗೆಯು (ಕಾಲಂ 9 ರಲ್ಲಿ) ಕಾಲಂ 8 ರ ಒಟ್ಟು ಮೊಬಲಗಿನ ಶೇ10 ರಷ್ಟಿರ ಬೇಕು

2) ಪ್ರತಿ ನೌಕರನಿಗೆ ನೀಡುವ ನಿಗಮದ ವಂತಿಗೆಯು (ಕಾಲಂ 10 ರಲ್ಲಿ) ಕಾಲಂ 8 ರ ಒಟ್ಟು ಮೊಬಲಗಿನ ಶೇ10 ರಷ್ಟಿರ ಬೇಕು

**<u>ಸಂಕ್ಷಿಪ್ತ ವಿವರಗಳು</u>**

| | | |
|---|---|---|
| 30.06.2012 ರ ಅಂತ್ಯಕ್ಕೆ ಇರುವ ಶಿಲ್ಕು | 46.952 | 44.150 |
| ಜುಲೈ 2012 ರಲ್ಲಿ ಜಮಾ ಆದ ಮೊಬಲಗು (ಮೇಲ್ಕಂಡ ಪಟ್ಟಿಯ ಪ್ರಕಾರ) | -------------- | |
| 31.07.2012 ಕ್ಕೆ ಅಂತ್ಯ ಇರುವ ಶಿಲ್ಕು | -------------- | |

ಸದರಿ ವಿವರಗಳ ಮತ್ತು ಲೆಕ್ಕ ಶೀರ್ಷಿಕೆಗಳಲ್ಲಿನ ಮೊಬಲಗು ಜುಲೈ 2012 ರ ತಾಳೆಪಟ್ಟಿಗೆ ಹೊಂದಾಣಿಕೆಯಾಗುತ್ತದೆ ಎಂದು ದೃಢೀಕರಿಸುತ್ತೇವೆ.

ಸಹಾಯಕ ಲೆಕ್ಕಾಧಿಕಾರಿ

ಲೆಕ್ಕಾಧಿಕಾರಿ

ಪರಿಶೀಲಿಸಲಾಗಿದೆ

ಉಲೆನಿ/ಲೆಅ/ಸಲೆಅ
ಆಂತರಿಕ ಪರಿಶೋಧನೆ
(ಕಚೇರಿ ಮೊಹರಿನೊಡನೆ)